ಊರಿಗೆ ಬಂದು ಇಳಿದುಬಿಟ್ಟಿದ್ದ. ಅಲ್ಲಿಂದ ಮನೆಯವರೆಗೆ ನಡೆದುಕೊಂಡು ಹೋಗಬೇಕಾದ ಸಂದರ್ಭದಲ್ಲಿ ಬಿಸಿಲ ತಾಪದ ಜೊತೆ ಮನದ ಬೇಗುದಿಯೂ ಸೇರಿ ಹೈರಾಣಾಗಿದ್ದ. ಇನ್ನೇನು ಮಧ್ಯಾಹ್ನದ ಊಟಕ್ಕೆ ಬಳ್ಳೆ ಹಾಕುವ ಹೊತ್ತು. ಓ ಅಷ್ಟು ದೂರದಲ್ಲಿ ಮಾವನಮನೆಯ ದರ್ಶನವಾಗುತ್ತಿದ್ದಂತೆ ಹೆಜ್ಜೆಗಳು ತಡವರಿಸಿದ್ದುವು. ಉಣುಗೋಲು ಸರಿಸಿ, ಅಂಗಳ ದಾಟಿ, ಮನೆಬಾಗಿಲಿಗೆ ಹೋದವನು ಅವಾಕ್ಕಾಗಿ ನಿಂತುಬಿಟ್ಟಿದ್ದ. ಮನೆಯ ಮುಂಬಾಗಿಲು ಮುಚ್ಚಿದೆ. ಆಚೀಚಿನ ಕಿಟಕಿಗಳೂ.ಇದ್ಯಾವಾಗಿನಿಂದ ಹಳ್ಳಿಮನೆಯಲ್ಲಿ ಹಗಲು ಹೊತ್ತಿಗೆ ಮುಂಬಾಗಿಲು ಮುಚ್ಚುವ ಅಭ್ಯಾಸ ಶುರುವಾಯ್ತು? ಎಲ್ಲಾದರೂ ಸಂತರ್ಪಣೆ ಮನೆ ಇದ್ದು ಎಲ್ಲರೂ ಒಟ್ಟಿಗೆ ಊಟಕ್ಕೆ ಎದ್ದಿರಬಹುದೇ? ಮುಂಬಾಗಿಲ ಅಗುಳಿ ಹಾಕಿ, ಹಿಂಬಾಗಿಲಲ್ಲಿ ಬೀಗ ಹಾಕಿ ಹೋಗಿದ್ದಾರೆಯೇ? ಅಮಾಯಕ ಬಾಗಿಲು ಬಡಿದಿದ್ದ. 'ಪುಟ್ಟೀ.., ಪುಟ್ಟೀ..' ಎಂದು ದನಿ ಎತ್ತರಿಸಿ ಕರೆದಿದ್ದ. ಹಿಂಬಾಗಿಲಲ್ಲಿ ಹೋಗಿ ನೋಡಲು ಗೊಬ್ಬರದ ಗುಂಡಿ ಬಳಸಿ ಕಿರುದಾರಿಯಲ್ಲಿ ನಡೆದು ಹೋಗಬೇಕು. ಮನೆಯಲ್ಲಿ ಯಾರಾದರೂ ಇದ್ದರೆ ತನ್ನ ಕರೆ ಕೇಳಿಯೇ ಇರುತ್ತದೆ. ಪುಟ್ಟೀ.., ಪುಟ್ಟೀ.. ಕೊನೆಕೊನೆಯಲ್ಲಿ ದನಿಯಲ್ಲಿ ಹತಾಶೆ ಆವರಿಸಿತ್ತಾ? ಬಂದ ದಾರಿಗೆ ಸುಂಕವಿಲ್ಲ ಎನ್ನುವಂತೆ ಕಾಲೆಳೆದು ಹಾಕುತ್ತಾ ವಾಪಸು ಹೊರಟವನು ಉಣುಗೋಲು ದಾಟಿ ಸ್ವಲ್ಪ ಹೊತ್ತು ನಿಂತಿದ್ದು ಅವನು ಮಾಡಿದ ತಪ್ಪು. ಅಥವಾ ಸರಿ. ವಿನಾಕಾರಣ ಎನ್ನುವಂತೆ ಐದಾರು ನಿಮಿಷ ಅಲ್ಲೇ ನಿಂತವನು ಮುಂದಿನ ಹೆಜ್ಜೆ ಇಡುವ ಮುನ್ನ ಒಮ್ಮೆ ತಿರುಗಿ ನೋಡುವುದಕ್ಕೂ, ಮುಂಬಾಗಿಲ ಪಕ್ಕದ ಕಿಟಕಿ ಸ್ವಲ್ಪವೇ ತೆರೆದುಕೊಂಡು ಅವನು ಅಲ್ಲೇ ಇರುವುದನ್ನು ಗಮನಿಸಿ ಮಿಂಚಿನ ವೇಗದಲ್ಲಿ ಮುಚ್ಚಿಕೊಂಡಿದ್ದಕ್ಕೂ ಸಮಸಮ. ಕ್ಷಣಾರ್ಧದಲ್ಲಿ ಮನಸ್ಸು ಗ್ರಹಿಸಿಬಿಟ್ಟಿತ್ತು, ಹೀಗೆ ಬಾಗಿಲು ತೆಗೆದು ಹಣಿಕಿದವಳು ಮತ್ತ್ಯಾರೂ ಅಲ್ಲ, ಅಗ್ನಿಸಾಕ್ಷಿಯಾಗಿ ತನ್ನ ಕೈ ಹಿಡಿದ ನಾಗಶ್ರೀ. ಭೂಮಿ ಬಾಯ್ಬಿಡಬಾರದೇ? ಎನ್ನುವಂತಾ ಅವಮಾನದ ಭಾವನೆಯಿಂದ ಮರಳಿ ಹೊರಟವನ ಒಂದೊಂದು ಹೆಜ್ಜೆಗಳಲ್ಲೂ ಪ್ರತೀಕಾರದ ಉರಿ ಧಗಧಗಿಸುತ್ತಿತ್ತು. ಮುಗಿಯಿತು, ತನ್ನ ಪಾಲಿಗೆ ಈ ಮನೆಯ ಋಣ ಶಾಶ್ವತವಾಗಿ ಕಡಿದುಹೋಯ್ತು. ಆತ್ಮಾಭಿಮಾನವನ್ನು ಒತ್ತೆಯಿಟ್ಟು, ಅಮ್ಮನ ಮಾತಿಗೆ ಬೆಲೆ ಕೊಟ್ಟು ಹೊರಟು ಬಂದಿದ್ದರ ಫಲ ಸರಿಯಾಗಿಯೇ ದಕ್ಕಿತು. ದೇವರ ದಯದಿಂದ ಹಿಂಬಾಗಿಲಿಗೆ ಹೋಗಿ ಪರೀಕ್ಷಿಸುವಷ್ಟು ಧಾರ್ಷ್ಟ್ಯ ತೋರಿಸದೆ ಹಾಗೇ ಹೊರಟು ಬಂದೆ. ಇಲ್ಲದಿದ್ದರೆ ಅವಮಾನದ ತೂಕ ಇನ್ನೊಂದು ಮುಷ್ಟಿ ಜಾಸ್ತಿಯಾಗುತ್ತಿತ್ತು.

ಬದುಕಿಯೂ ಸತ್ತಂತಾ ಭಾವನೆಯಿಂದ ತಗ್ಗಿಸಿದ ತಲೆ ಮೇಲೆತ್ತದೆ ವಾಪಸು ತನ್ನ ಮನೆಬಾಗಿಲಿಗೆ ಬಂದಿದ್ದ ರಾಮಚಂದ್ರ. ಹಾಗೆ ಹೋಗಿ ಹೀಗೆ ಮರಳಿ ಬಂದ ಮಗನನ್ನು ಕಂಡು ಉಸಿರು ಬಿಗಿ ಹಿಡಿದಿದ್ದರು ರಾಧಮ್ಮ.

'ಏನಾಯ್ತೋ? ಇಷ್ಟು ಬೇಗ ಯಾಕೆ ವಾಪಸು ಬಂದ್ಯೋ? ಊಟಾನೂ ಮಾಡಿಕೊಂಡು ಬಂದ ಹಾಗೆ ಕಾಣ್ತಿಲ್ಲ..' ದುಶ್ಶಂಕೆಯಿಂದ ಕಳವಳಿಸುತ್ತಾ ಕೇಳಿದ್ದರು.

'ಹೊಟ್ಟೆಬಿರಿ ಊಟ ಮಾಡ್ಕಂಡೇ ಬಂದಿದ್ದು. ಇನ್ನು ಯಾವತ್ತೂ ಹಸಿವಾಗ್ದಿದ್ದ ಹಂಗೆ ಔತಣ ಹಾಕಿ ಕಳಿಸಿಕೊಟ್ರು..'

'ಏನಾಯ್ತು, ಹೇಳಾದ್ರೂ ಹೇಳೋ..'

'ನಿನ್ನ ಮಾತು ಕೇಳಿದ್ದಕ್ಕೆ ತಕ್ಕ ಶಾಸ್ತಿ ಆಯ್ತು. ಮರ್ಯಾದೆ ಮೂರುಕಾಸಿಗೆ ಹರಾಜಾಯ್ತು..'

ಮಗ ಹೇಳಿದ್ದನ್ನೆಲ್ಲಾ ಕೇಳಿ ರಾಧಮ್ಮ ಕಂಗೆಟ್ಟಿದ್ದರು.

'ಇದೆಂತಾ ವಿಚಿತ್ರಾನೋ? ಕೊನೇಪಕ್ಷ ನೀನು ಯಾತಕ್ಕೆ ಬಂದಿದ್ದಿ ಅಂತ ಕೇಳೋ ಸೌಜನ್ಯ ಆದ್ರೂ ಬ್ಯಾಡ್ವಾ? ನಿನ್ನ ಜಾತಕ ಭಾರೀ ಒಳ್ಳೇದಿದೆ ಅಂತ ಕೋಡು ಬಂದಿತ್ತು ನಂಗೆ. ಆಯ್ತಲ್ಲ ಮರ್ಯಾದಿ..' ರಾಧಮ್ಮ ಇನ್ನೇನು ಭೋರ್ಗರೆದು ಅಳುತ್ತಾರೆ ಎನ್ನುವ ಸುಳಿವು ಹತ್ತಿ ಕರ್ಕಶವಾಗಿ ಹೇಳಿದ್ದ ರಾಮಚಂದ್ರ,

'ಇನ್ನ್ಯಾವತ್ತೂ ಒಂದು ಹನಿ ಕಣ್ಣೀರು ಹಾಕ್ಬಾರ್ದು ನೀನು. ಹಿಂದೆ ಮುಂದೆ ಯೋಚ್ನೆ ಮಾಡ್ದೆ ಸಂಬಂಧ ಬೆಳೆಸಿದ್ದರ ಫಲ ಉಣ್ತಿದೀವಿ ಅಂದ್ಹಾ. ನೀನೇನಾದ್ರೂ ಅತ್ತು, ಕರೆದು ಗಲಾಟೆ ಮಾಡಿದ್ರೆ ನೇಣು ಬಿಕ್ಕಂತೀನಿ ನಾನು..'

'ಒಳ್ಳು ಅನ್ನೋ.., ಒಳ್ಳು ಅನ್ನೋ..'

'ಅದೊಂದೇ ಗೊತ್ತಿರೋದು ನಿಂಗೆ..'

ಮಗನ ಭಯಕ್ಕೆ ಎನ್ನುವಂತೆ ಅವನ ಎದುರು ಕಣ್ಣೀರು ಹಾಕಲಿಲ್ಲ ರಾಧಮ್ಮ. ಆದರೆ ಪೆಟ್ಟಿನ ಮೇಲೆ ಬಿದ್ದ ಪೆಟ್ಟನ್ನು ಸೈಸಿಕೊಳ್ಳುವುದಕ್ಕೆ ಈಗಾಗಲೇ ಜೀರ್ಣವಾಗಿದ್ದ ಶರೀರ ಸಹಕರಿಸಲಿಲ್ಲ. ಬಿಚ್ಚಿದ ಹಾಸಿಗೆ ಮಡಚುವ ಪಂಚಾತಿಕೆ ಇಲ್ಲದೆ ರಾಧಮ್ಮ ದಿನದ ಬಹುಪಾಲು ಮಲಗಿಯೇ ಕಳೆಯತೊಡಗಿದರು. ಹಲ್ಲುಮುಡಿ ಕಚ್ಚಿ ಅನ್ನುವಂತೆ ಅಮ್ಮನ ಸೇವೆಗೆ ಕಟಿಬದ್ಧನಾದ ರಾಮಚಂದ್ರ. ಹಟ ಅನ್ನುವುದು ನಿಸ್ಸಹಾಯಕತೆಯನ್ನೂ ಮೀರಿ ಶಕ್ತಿ ತುಂಬಿ ಬಿಡುತ್ತದೆ ಅನ್ನುವುದಕ್ಕೆ ಸಾಕ್ಷಿಯಾದ.

* * *

## ಹಾಸಿಗೆ ಹಿಡಿದ ರಾಧಮ್ಮ

ಹಾಸಿಗೆ ಹಿಡಿದು ಮಲಗಿದವರು ಬೇಗ ಸಾಯುತ್ತಾರೆ ಮತ್ತು ಯಾವ ಅರೆಯೂ ಕಾಣದಂತೆ ಓಡಾಡಿಕೊಂಡಿರುವವರು ಹೆಚ್ಚು ಕಾಲ ಬದುಕುತ್ತಾರೆ ಎನ್ನುವುದೆಲ್ಲಾ ಸುಳ್ಳು ಎಂದು ಸಾಬೀತು ಪಡಿಸುವಂತೆ ಒಬ್ಬ ಮಗ ಸತ್ತಿದ್ದನ್ನು ಜೀರ್ಣಿಸಿಕೊಂಡಿದ್ದ ರಾಧಮ್ಮ ಮತ್ತೊಬ್ಬ ಮಗನ ಸಂಸಾರ ಮುರಿದು ಬಿದ್ದ ಆಘಾತವನ್ನು ಸೈಸಿಕೊಂಡೂ ಬದುಕಿ ಉಳಿದರು. ಮಲಗಿದಲ್ಲೇ ಸಕಲ ಸೇವೆ ಮಾಡಿಸಿಕೊಂಡರು. ಆ ಯಮ ನನ್ನ ಮರ್ತೇಬಿಟ್ಟಿದಾನೆ ಎಂದು ಗೋಳಾಡುತ್ತಲೇ ದಿನಗಳು ತಿಂಗಳುಗಳಾಗಿ, ವರ್ಷಗಳು ಉರುಳುರುಳಿ, ಅಮ್ಮ ಸತ್ತು ಕಳೆದ ಮಳೆಗಾಲಕ್ಕೆ ಐದು ವರ್ಷ. ರಾಮಚಂದ್ರ ಚೂರೂ ಗೊಣಗದೆ ನಿಸ್ಪ್ರಹತೆಯಿಂದ ಕೊನೆಯವರೆಗೆ ಅಮ್ಮನ ಸೇವೆ ಮಾಡಿ ಅವಳ ಋಣ ತೀರಿಸಿದ್ದ. ಅಮ್ಮನ ಮಲ ಮೂತ್ರಗಳ ಶಂಕೆ ನಿವಾರಿಸಲು ಕೈಯಾಸರೆ ಕೊಡಲು ಅವನಿಗೆ ಹೇಸಿಗೆಯಾಗುತ್ತಿರಲಿಲ್ಲ. ವಾಂತಿ ಬರುತ್ತಿರಲಿಲ್ಲ. ಅಮ್ಮನ ಕೈಕಾಲು ಒತ್ತಲು ಬೇಸರವೆನಿಸುತ್ತಿರಲಿಲ್ಲ. ಅಮ್ಮನ ಕಟ್ಟಿಸಿದ ದಂತಪಂಕ್ತಿಗಳನ್ನು ಬ್ರಶ್ನಲ್ಲಿ ಉಜ್ಜಿ ಮರಳಿ ಅವಳ ಬಾಯಿಗಿರಿಸಲು ಅಸಹ್ಯವೆನಿಸುತ್ತಿರಲಿಲ್ಲ. ಇವನು ತಾಯಿ, ಅವಳು ಮಗು. ಜೊತೆಗೆ ಹೆಗಲು ಕೊಡಲು ಅವಳೊಬ್ಬಳಿದ್ದಳು, ಈ ಮನೆಯ ಉಪ್ಪಿನ ಋಣ ತೀರಿಸಲು ನಿಷ್ಠೆಯಿಂದ ದುಡಿಯುತ್ತಿದ್ದವಳು, ವಾರಕ್ಕೆ ಮೂರು ದಿನ ಕೆಲಸಕ್ಕೆ ಉಳಿ ಮಾಡುವ ಕುಡುಕ ಗಂಡ ಗಂಟು ಬಿದ್ದ ದುರಾದೃಷ್ಟಕ್ಕೆ ನಾಲ್ಕು ಮಕ್ಕಳನ್ನು ಬೆಳೆಸಿ ದೊಡ್ಡ ಮಾಡಲು ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತಿದ್ದವಳು, ತೀರಾ ಅನಿವಾರ್ಯವಿಲ್ಲದಿದ್ದರೆ ಯಾವತ್ತೂ ಕೆಲಸಕ್ಕೆ ಚಕ್ರ ಹಾಕದವಳು, ಹೆಸರಿಗೆ ತಕ್ಕಂತೆ ರತ್ನ. ಅವಳದ್ದೇ ಧೈರ್ಯ ಅವನಿಗೆ. ಮನೆ ಬಿಟ್ಟು ಎಲ್ಲಿಗೆ ಹೋಗಬೇಕಾದರೂ ಮನೆಗಾವಲಿಗೆ, ಅಮ್ಮನ ಮೇಲ್ವಿಚಾರಣೆಗೆ, ಅವಳೇ ಆಸರೆ. ಏನೇ, ಆ ಮನೇಲಿ ನಿಂಗೆ ನೆಲ ಸುಟ್ಟು ಅನ್ನ ಹಾಕಿದಾರಾ? ಎಂದು ಪರಿಚಯಸ್ಥರು ಲೇವಡಿ ಮಾಡುತ್ತಿದ್ದುದನ್ನು ನೆಗಾಡುತ್ತಲೇ ಹೇಳಿಕೊಳ್ಳುತ್ತಿದ್ದಳು ರತ್ನ. ದೇವರು ದೊಡ್ಡವನು ಎಂದು ಇದಕ್ಕೇ ಹೇಳುವುದಾ? ಇದ್ದಾನೆಯೇ ಆ ದೇವರು? ಒಂದು ಬಾಗಿಲು ಮುಚ್ಚಿದರೆ ಮತ್ತೊಂದು ಬಾಗಿಲು ತೆರೆದುಕೊಳ್ಳುತ್ತದೆ ಎನ್ನುವ ಹೇಳಿಕೆ ಮಾತಿನಂತೆ ರಾಮಚಂದ್ರನ ಸಹಾಯಕ್ಕೆ ಮನೆಯವಳಂತೆ ಸಹಕರಿಸುವ ಒಂದು ಜೀವ ಸಿಕ್ಕಿತ್ತು. ಜಾತಿಯ ಹಂಗಿಲ್ಲದ ವಿಶ್ವಾಸ ಬೆಳೆದಿತ್ತು. ರಾಮಚಂದ್ರನಿಗಿಂತಾ ಹತ್ತೆಂಟು ವರ್ಷ ದೊಡ್ಡವಳಿರಬಹುದಾದ ಅವಳನ್ನು ರಾಧಮ್ಮ ಅತೀ ಅನ್ನಿಸುವಷ್ಟು ಆಶ್ರಯಿಸಿಕೊಂಡಿದ್ದರು. ವಯಸ್ಕನಾಗಿದ್ದ ಮಗನಿಂದ ಸೇವೆ ಮಾಡಿಸಿಕೊಳ್ಳುವಾಗ ಉಂಟಾಗುತ್ತಿದ್ದ ಸಂಕೋಚ, ಮುಜುಗರ ರತ್ನನಿಂದ ಅರೈಕೆ ಮಾಡಿಸಿಕೊಳ್ಳುವಾಗ ಕಾಡುತ್ತಿರಲಿಲ್ಲ. ಹಾಗಾಗಿ ಅವಳು ಮನೆಯಲ್ಲಿರುತ್ತಿದ್ದ ಹಗಲಿನ ಹೊತ್ತು ಮನೆಗೆಲಸದ ಜೊತೆಜೊತೆಗೆ ರಾಧಮ್ಮನ ಸೇವೆಗೆ ಅವಳು ಮೀಸಲು. ಕೊನೆಕೊನೆಯಲ್ಲಿ ರಾಧಮ್ಮ ಅವಳನ್ನು ಎಷ್ಟು ಹಚ್ಚಿಕೊಂಡು ಬಿಟ್ಟಿದ್ದರು ಅಂದರೆ ಮಗನಿಂದ ಪೆಠಾರಿ ತೆಗೆಸಿ ತಮ್ಮ ರೇಷ್ಮೆಸೀರೆಗಳಲ್ಲಿ ಎರಡನ್ನು ಅವಳಿಗೆ ದಾನ ಮಾಡಿದ್ದರು. ದಿನಬಳಕೆಯ ಸೀರೆಗಳು ಸರಿಯೇ ಸರಿ. ಅಮ್ಮ ರೇಷ್ಮೆಸೀರೆಗಳನ್ನೇ ಎತ್ತಿ ಕೊಟ್ಟಾಗ ರತ್ನ ತೆಗೆದುಕೊಳ್ಳಲು ಹಿಂದೇಟು ಹಾಕಿದ್ದಳು.

(ಸಶೇಷ)